**63**

# ನಮ್ಮಲ್ಲಿ ಪ್ರಶ್ನೆಗಳಿರುವಾಗ

## ಓದುವ ಮನೆಪಾಠ #26

VI. ಮೂರನೇ ಪಸ್ಕದಿಂದ, ಆತನು ಬೆಥನಿಗೆ ಹಿಂದಿರುಗಿದ ಸಮಯದವರೆಗೆ (ಮುಂದುವರೆಯುವದು).

S. ಯೆರೂಸಲೇಮಿಗೆ ಅಂತಿಮ ಪ್ರಯಾಣ (ಲೂಕ 17:11ಎ) (ಮುಂದುವರೆಯುವದು).

4. ವಿಚ್ಛೇದನ ಕುರಿತ ಪ್ರಶ್ನೆ - ಮದುವೆ ಕುರಿತ ಬೋಧನೆ (ಮತ್ತಾಯ 19:3-12; ಮಾರ್ಕ 10:2-12).
5. ಮಕ್ಕಳ ಕುರಿತ ಗೊಂದಲ - ಮಕ್ಕಳಿಗಾಗಿರಬೇಕು ಎಂಬ ಬೋಧನೆ (ಮತ್ತಾಯ 19:13-15; ಮಾರ್ಕ 10:13-16; ಲೂಕ 18:15-17).
6. ನಿತ್ಯತ್ವದ ಕುರಿತ ಪ್ರಶ್ನೆ - ಐಶ್ವರ್ಯದ ಕುರಿತ ಬೋಧನೆ (ಐಶ್ವರ್ಯವಂಥನಾದ ಯೌವನಸ್ಥನು) (ಮತ್ತಾಯ 19:16-26; ಮಾರ್ಕ 10:17-27; ಲೂಕ 18:18-27).
7. ಪ್ರತಿಫಲ ಕುರಿತ ಪ್ರಶ್ನೆ - ದೇವರ ಆಶೀರ್ವಾದ ಕುರಿತ ಬೋಧನೆ (ಮತ್ತಾಯ 19:27-30; ಮಾರ್ಕ 10:28-31; ಲೂಕ 18:28-30), ದ್ರಾಕ್ಷೆ ತೋಟದ ಸೇವಕನ ಸಾಮ್ಯ (ಮತ್ತಾಯ 20:1-16).

## ಪರಿಚಯ

ಕೆಲವರು ಸತ್ಯವೇದದಲ್ಲಿನ ಪ್ರಶ್ನೆಗಳನ್ನು ಕೇಳಲು ಹಿಂಜರಿಯುತ್ತಾರೆ. ತರಗತಿಯಲ್ಲಿ ಅದು ಅಡಚಣೆಯಾಗಬಹುದು ಎಂದು ಭಾವಿಸುತ್ತಾರೆ. ಇತರರು ಇವರ ಬಗ್ಗೆ ಇವರು ಏನೂ ತಿಳಿಯದವರು, ಎಂದು ತಿಳಿಯುವ ಕಾರಣವಿರಬಹುದು. ಕಾರಣವೇನೇ ಇದ್ದರೂ, ಅವರು ಪ್ರಶ್ನೆಯನ್ನು ಮಾತ್ರ ಕೇಳುವದಿಲ್ಲ - ಅವರಿಗೆ ಉತ್ತರವೂ ದೊರೆಯುವದಿಲ್ಲ. ಸ್ಪರ್ಧಾತ್ಮಕ ಉಪಾಧ್ಯಾಯರು ಪ್ರಶ್ನೆಗಳನ್ನು ಆಹ್ವಾನಿಸುತ್ತಾರೆ. ಕಲಿಯುವಿಕೆಯಲ್ಲಿ ಪ್ರಶ್ನೆಗಳು ಪ್ರಮುಖ ಸ್ಥಾನ ವಹಿಸುತ್ತವೆ. ಪ್ರಶ್ನೆಕೇಳುವವನು, ಯೋಚಿಸುತ್ತಾನೆ ಎಂದು ಅರಿಯಬಹುದು. ಯಥಾರ್ಥವಾಗಿ ಪ್ರಶ್ನಿಸುವವನು. ಕಲಿಯಲು ಸಿದ್ಧವಾಗಿರುತ್ತಾನೆ ಎಂದು ತಿಳಿದು ಬರುತ್ತದೆ.

ಹಿಂದಿನ ಪಾಠದಲ್ಲಿ ಯೇಸು ಯೆರೂಸಲೇಮಿನ ಕಡೆಗೆ ಪ್ರಯಾಣ ಆರಂಭಿಸಿ, ಯೋರ್ದನ್ ನದಿ ದಿಣ್ಣೆಯನ್ನು ಹತ್ತಿ ಹೋಗುವಾಗ ಅವನೊಂದಿಗೆ ಜನರು ಸಹ ಪಂಚಾಶತ್ತಮ ಹಬ್ಬಕ್ಕಾಗಿ ಹೊರಟಿದ್ದರು. ಪ್ರಯಾಣದಲ್ಲಿ ಆತನು ಉಪದೇಶವನ್ನು ಮುಂದುವರೆಸಿದರು (ಮಾರ್ಕ 10:1). ಆತನ ವೈರಿಗಳು, ಶಿಷ್ಯರು ಇತರರು ಸಹ ಪ್ರಶ್ನೆಗಳನ್ನು ಮುಂದುವರೆಸಿದರು (ಮತ್ತಾಯ 19:3, 7), (ಮತ್ತಾಯ 19:25, 27; ಮಾರ್ಕ 10:10); ಮತ್ತು ಇತರರೂ (ಮತ್ತಾಯ 19:16, 20). ಕ್ರಿಸ್ತನ ಮನಸ್ಸು ಶಿಲುಬೆಯ ಮೇಲಿದ್ದರೂ (ಲೂಕ 12:50; ಮತ್ತಾಯ 20:17-19), ಪ್ರಶ್ನೆಗಳ ನಿಮಿತ್ತ ಆತನು ಬೇಸರ ಪಡಲಿಲ್ಲ. ಸಕಲ ಪ್ರಶ್ನೆಗಳಿಗೂ ಉತ್ತರ ನೀಡಲಾಯಿತು. ಬೋಧಕನು ನನ್ನ ಪ್ರಶ್ನೆಗೆ "ಉತ್ತರ ನೀಡಲಿಲ್ಲ, ನನ್ನನ್ನು ಅಲಕ್ಷಮಾಡಿದನು ಎಂದು ಯಾರೂ ಹೇಳಲಿಲ್ಲ."

ಆ ಒಂದು ದುಃಖದ ಪ್ರಯಾಣದಲ್ಲಿ ಕೆಲವು ಪ್ರಶ್ನೆಗಳನ್ನು ಕೇಳಲಾಯಿತು. ನಿಮ್ಮ ಪ್ರಶ್ನೆಗಳಿಗೂ ಆತನು ಉತ್ತರ ನೀಡುವವನಾಗಿದ್ದಾನೆ. ಪ್ರಶ್ನೆ ಕೇಳುವದರಲ್ಲಿ ಯಾವುದೇ ಅಡ್ಡಿ ಇರುವದಿಲ್ಲ. ಉತ್ತರ ನೀಡಲು ಕರ್ತನು ಸಹಾಯಿಸುತ್ತಾನೆ.

## ಪತ್ನಿ ಪರಿತ್ಯಾಗದ ಕುರಿತ ಪ್ರಶ್ನೆ?
## (ಮತ್ತಾಯ 19:3-12; ಮಾರ್ಕ 10:2-12)[1]

**ಫರಿಸಾಯರು ಕೇಳಿದರು (ಮತ್ತಾಯ 19:3; ಮಾರ್ಕ 10:2)**

ಆತನ ಪ್ರಯಾಣದ ನಡುವೆ ಫರಿಸಾಯರು ಆತನಿಗೆ ಅಡ್ಡಿಪಡಿಸುತ್ತಿದ್ದರು. "ಸ್ವಲ್ಪ ಸಮಯದ ಹಿಂದೆ ಅವರು, ದೇವರ ರಾಜ್ಯವು ಯಾವಾಗ ಬರುತ್ತದೆ?" (ಲೂಕ 17:20).[2] ಎಂದಿದ್ದರು. ಈಗ ಅವರು ಇನ್ನೊಂದು ಪ್ರಶ್ನೆ ಮಾಡಿದರು. "ಆಗ ಫರಿಸಾಯರು ಹತ್ತರಕ್ಕೆ ಬಂದು ಆತನನ್ನು ಪರೀಕ್ಷಿಸಬೇಕೆಂಬ ಆಲೋಚನೆಯಿಂದ ಒಬ್ಬನು ಯಾವದಾದರೂ ಒಂದು ಕಾರಣದಿಂದ ತನ್ನ ಹೆಂಡತಿಯನ್ನು ಬಿಟ್ಟು ಬಿಡುವದು ಧರ್ಮವೋ?" ಎಂದರು (ಮತ್ತಾಯ 19:3). ಅನೇಕ ಪ್ರಶ್ನೆಗಳು ಯಥಾರ್ಥವಾಗಿದ್ದರು, ಒಂದೊಂದು ಪ್ರಶ್ನೆಗಳು ವ್ಯತಿರಿಕ್ತ ಮನೋ ಭಾವನೆ ಹೊಂದಿದ್ದು ಈಗ ಆತನನ್ನು ಪರೀಕ್ಷಿಸುವ ಪ್ರಶ್ನೆಯನ್ನು ಅವರು ಕೇಳಿದ್ದರು.

ಯಾವನಾದರು ತಾನು ಮದುವೆ ಮಾಡಿಕೊಂಡ ಸ್ತ್ರೀಯಲ್ಲಿ ಏನೋ ಅವ ಲಕ್ಷಣಗಳನ್ನು ಕಂಡು ಅವಳಲ್ಲಿ ಸಂತೋಷ ಪಡೆದೆ ಇದ್ದರೆ "ತ್ಯಾಗ ಪತ್ರವನ್ನು" ನೀಡಬಹುದೆಂದು ಮೋಶೆಯು ತಿಳಿಸಿದ್ದನು (ಧರ್ಮೋಪದೇಶಕಾಂಡ 24:1). "ಅವಲಕ್ಷಣ" ಎಂಬ ಪದದ ಬಗ್ಗೆ ಪಂಡಿತರು ಭಿನ್ನಾಭಿಪ್ರಾಯ ಹೊಂದಿರುವರು. ಎರಡು ಪ್ರಮುಖ ಆಲೋಚನೆ: ಹಿಲ್ಲೆಲ್ ಶಾಲೆ, ಹಾಗೂ ಶಮ್ಮೈಶಾಲೆ ಯವುದೇ ವಿಧವಾದ ಅಪರಾದವು ಹೆಂಡತಿಯಲ್ಲಿ ಕಂಡು ಬಂದರೆ: ಉದಾಹರಣೆ: ಆಕೆ ರೊಟ್ಟಿಯನ್ನು ಸುಟ್ಟು ಬಿಟ್ಟರೆ, ಅಥವಾ ಸುಂದರನೂ, ಯೌವನಸ್ಥನ ಹಿಂದೆ ಹೋದರೆ ಪರಿತ್ಯಾಗ ಮಾಡಬಹುದು ಎಂಬುದು ಹಿಲ್ಲೆಲ್ ಶಾಲೆಯ ವಾದ, ಅನೈತಿಕ ಸಂಬಂಧವಿದ್ದರೆ ಮಾತ್ರ ಪರಿತ್ಯಾಗ ಮಾಡಬಹುದು ಎಂಬುದು ಶೆಮ್ಮೈ ಶಾಲೆಯ ತರ್ಕ. ಈಗ ಯೇಸು ಈ ಎರಡರ ನಡುವಿನ ಉತ್ತರವನ್ನು ಹೇಗೆ ನೀಡುವನು ಎಂಬುದು ಫರಿಸಾಯರ ಯೋಚನೆಯಾಗಿತ್ತು.

ಈಗಾಗಲೇ ಯೇಸು ಹೆಂಡತಿ ಪರಿತ್ಯಾಗದ ಕುರಿತ ಉಪದೇಶ ನೀಡಿದ್ದನು (ಮತ್ತಾಯ 5:31, 32). ಯೇಸು ಮೋಶೆಯ ಧರ್ಮಶಾಸ್ತ್ರದ ಪ್ರಕಾರ ಉತ್ತರ ನೀಡದಿದ್ದರೆ, ಜನರು ಆತನನ್ನು ವಿರೋಧಿಸುವರು ಎಂದು ಫರಿಸಾಯರು ತಿಳಿದರು. ಯೇಸುವಿನ ಉತ್ತರ ಯಾವುದೇ ಇರಲಿ, ಯೇಸುವನ್ನು ಇಕ್ಕಟ್ಟಿನಲ್ಲಿ ಸಿಲುಕಿಸುವದು ಫರಿಸಾಯರ ಕುತಂತ್ರವಾಗಿತ್ತು.[4]

**ಯೇಸು ನೀಡಿದ ಉತ್ತರ (ಮತ್ತಾಯ 19:3-6; ಮಾರ್ಕ 10:6-9[5])**

ನಾನು ಉಪದೇಶಕನಾಗಿರುವದರಿಂದ, ಪ್ರಶ್ನೆಗಳಿಗೆ ಉತ್ತರ ನೀಡುತ್ತೇನೆ ಆದರೆ ಪರಿತ್ಯಾಗದ ಚರ್ಚೆಯನ್ನು ಇಷ್ಟಪಡುವದಿಲ್ಲ. ಆ ವಿಚಾರದಲ್ಲಿ ಪ್ರಥಮವಾದ ಪ್ರಶ್ನೆ ಇದಾಗುವದಾದರೆ, "ಸರಳವಾದ ಪ್ರಶ್ನೆಯನ್ನು ಕೇಳಿರಿ ಎಂದು ನಾನು ಹೇಳಬಹುದು!" ಆದರೆ ಯೇಸು ಆ ಪ್ರಶ್ನೆಗೆ ಉತ್ತರ ನೀಡಿದನು. ಆತನು ನನ್ನ ಆಲೋಚನೆಗಳಂತೆ ಉತ್ತರ ನೀಡದೆ, ಆದಿಯಲ್ಲಿ ದೇವರು ಮದುವೆಯ ವಿಷಯದಲ್ಲಿ ಮಾಡಿದ ಕ್ರಮವನ್ನು ಉತ್ತರಿಸಿದನು ಆದಿಕಾಂಡ 1 ಮತ್ತು 2:

> ಆತನು - ಮನುಷ್ಯರನ್ನು ನಿರ್ಮಾಣಮಡಿದವನು ಆದಿಯಿಂದಲೇ ಅವರನ್ನು ಗಂಡುಹೆಣ್ಣಾಗಿ[6] ನಿರ್ಮಿಸಿ ಅವರ ವಿಷಯದಲ್ಲಿ - ಈ ಕಾರಣದಿಂದ ಪರುಷನು ತಂದೆತಾಯಿಗಳನ್ನು ಬಿಟ್ಟು ತನ್ನ ಹೆಂಡತಿಯನ್ನು ಸೇರಿಕೊಳ್ಳುವನು; ಅವರಿಬ್ಬರು ಒಂದೇ ಶರೀರವಾಗರುವರು ಎಂದು ಹೇಳಿದನೆಂಬುದಾಗಿ ನೀವು ಓದಲಿಲ್ಲವೋ[7] ಹೀಗಿರುವಲ್ಲಿ ಅವರು ಇನ್ನು ಇಬ್ಬರಲ್ಲಿ, ಒಂದೇ ಶರೀರವಾಗಿದ್ದಾರೆ (ಮತ್ತಾಯ 19:4-6)[8]

ಧರ್ಮೋಪದೇಶಕಾಂಡ 24ರಲ್ಲಿ ಮೋಶೆಯು ಬರೆದಿಟ್ಟ ವಿಚಾರದ ಕುರಿತು ಫರಿಸಾಯರು ಕೇಳಿದರು. ಆ ಪಾಠದ ಕುರಿತು ಮೋಶೆಯು ಬರೆದಿದ್ದನು ಈ ಹಿಂದೆಯೇ ಯೇಸು ಉತ್ತರಿಸಿದನು. ಆದ್ದರಿಂದ ಆ ಮಹಾನಾಯಕನ ಹಾಗೂ ಕ್ರಿಸ್ತನ ನಡುವೆ ಯಾವುದೇ ಭಿನ್ನಾಭಿಪ್ರಾಯವಿಲ್ಲ ಎಂಬುದನ್ನು ಆತನು ನಿರೂಪಿಸಿದ್ದನು.

### ಫರಿಸಾಯನು ಕೇಳಿದನು (ಮತ್ತಾಯ 19:7)

ಕೋಪಗೊಂಡ ಫರಿಸಾಯನು, "ಹಾಗಾದರೆ ತ್ಯಾಗ ಪತ್ರವನ್ನು ಕೊಟ್ಟು ಆಕೆಯನ್ನು ಬಿಟ್ಟುಬಿಡಬಹುದೆಂದು ಮೋಶೆಯು ಯಾಕೆ ಆಜ್ಞೆಕೊಟ್ಟನು?" ಎಂದು ಕೇಳಿದನು (ಮತ್ತಾಯ 19:7). "ಅದು ನಿರಂತರ ಬಂಧವಾಗಿದ್ದರೆ, ಯಾಕೆ ಮೋಶೆಯ ಧರ್ಮೋಪದೇಶಕಾಂಡ 24:1-4 ಬರೆದನು?"[9]

### ಯೇಸುವಿನ ಉತ್ತರ (ಮತ್ತಾಯ 19:8, 9)

ಯೇಸು ಉತ್ತರಿಸಿ, "ಮೋಶೆಯು ನಿಮ್ಮ ಮೊಂಡತನವನ್ನು ನೋಡಿ ನಿಮ್ಮ ಹೆಂಡರನ್ನು ಬಿಟ್ಟು ಬಿಡುವದಕ್ಕೆ ಅಪ್ಪಣೆಕೊಟ್ಟನು" (ಮತ್ತಾಯ 19:8). ತ್ಯಾಗ ಪತ್ರವನ್ನು ಮೋಶೆ *ಆಜ್ಞಾಪಿಸಿದನು* ಎಂದು (ವಚನ 7) ಫರಿಸಾಯರು ಹೇಳಲು, ಮೋಶೆಯು ಅದನ್ನು ಅನುಮೋದಿಸಿದ್ದಾನೆ (ವಚನ 8) - ಇದು ಒಂದು ಮಹತ್ವದ ವ್ಯತ್ಯಾಸ ಎಂದು ಕ್ರಿಸ್ತನು ಹೇಳಿದನು.

ಮದುವೆಯ ಬಂದ ಸತ್ಯವೇದದ ಆದಿಯಿಂದಲೇ ನಿರಂತರವಾದದ್ದು ಎಂದು ದೇವರು ದೃಢಪಡಿಸಿದ್ದಾನೆ (ವಚನ 8; ಆದಿಕಾಂಡ 2:24), ಹಳೇ ಒಡಂಬಡಿಕೆಯ ಅಂತ್ಯದಲ್ಲಿ, "ನಾನು ಪರಿತ್ಯಾಗ"ವನ್ನು ದ್ವೇಷಿಸುತ್ತೇನೆ ಎಂದು ದೇವರು ತಿಳಿಸಿರುವನು (ಮಲಾಕಿ 2:16). ಈ ಪರಿಸ್ಥಿತಿ ಇರುವಾಗ, ಪರಿತ್ಯಾಗವನ್ನು ಮಂಜೂರು ಮಾಡಿದ್ದೇಕೆ? ಅವರ ಕಠಿಣವಾದ ಹೃದಯದ ನಿಮಿತ್ತ ಎಂದು ಯೇಸು ಹೇಳಿದನು. ಬುದ್ಧಿವಂತರ ನಿಯಮವನ್ನು ಪಾಲಿಸುವದಾದರೂ ತಿಳುವಳಿಕೆ ಇಲ್ಲದ ಬಾಲಕರಿಗೆ ಸ್ವತಂತ್ರ ನೀಡುವಂತಿರುತ್ತದೆ. ಅದೇ ರೀತಿಯಲ್ಲಿ ಆದಿಯಲ್ಲಿ ದೇವರು ತಾನು ಇಚ್ಚಿಸದ ಸಂಗತಿಗಳನ್ನು ಅವರು ಪಾಲಿಸುವಂತೆ ಮಾಡಿದನು.[10] ಅಪೊಸ್ತಲರ ಕೃತ್ಯಗಳು 17:30 ಪ್ರಕಾರ: "ಆ ಅಜ್ಞಾನ ಕಾಲಗಳನ್ನು ದೇವರು ಲಕ್ಷ್ಯಕ್ಕೆ ತರಲಿಲ್ಲ; ಈಗಲಾದರೋ ಆತನು ನಾಲ್ಕು ದಿಕ್ಕಿನಲ್ಲಿರುವ ಮನುಷ್ಯರೆಲ್ಲರೂ ತನ್ನ ಕಡೆಗೆ ತಿರುಗಿಕೊಳ್ಳಬೇಕೆಂದು ಅಪ್ಪಣೆಕೊಡುತ್ತಾನೆ."[11]

ಯೇಸು ಈ ಹಿಂದೆ ಪರಿತ್ಯಾಗದ ಕುರಿತು ಮಾಡಿದ್ದ ಉಪದೇಶವನ್ನು ಬದಲಾಯಿಸಬಹುದೆಂದು ಅವರು ಅಪಾರ್ಥಮಾಡಿಕೊಂಡಿದ್ದರು (ಮತ್ತಾಯ 5:31, 32). ಆದರೆ ಆತನು ಅದಕ್ಕೆ ಮತ್ತೊಂದು ಸಂಗತಿಯನ್ನು ಸೇರಿಸಿದನು. "ಮತ್ತು ಹಾದರದ ಕಾರಣದಿಂದಲ್ಲದೆ ತನ್ನ ಹೆಂಡತಿಯನ್ನು ಬಿಟ್ಟು ಮತ್ತೊಬ್ಬಳನ್ನು ಮದುವೆಮಾಡಿಕೊಳ್ಳುವವನು ವ್ಯಭಿಚಾರ ಮಾಡುವವನಾಗುತ್ತಾನೆಂದು ನಿಮಗೆ ಹೇಳುತ್ತೇನೆ ಅಂದನು" (ಮತ್ತಾಯ 19:9).[12]

ಯೇಸುವಿನಲ್ಲಿ ತಪ್ಪು ಕಂಡುಹಿಡಿಯುವಲ್ಲಿ ಫರಿಸಾಯರು ಸೋತುಹೋದರು. ಪುನಃ ಅವರು ಕಠಿಣ ಮುಖವನ್ನು ಹೊಂದಿ ಹಿಂದಿರುಗಿದರು.

### ಶಿಷ್ಯರು ಕೇಳಿದಂತೆ ಯೇಸು ಉತ್ತರಿಸಿದನು ಶಿಷ್ಯರು ಕೇಳಿದರು (ಮಾರ್ಕ 10:10-12; ಮತ್ತಾಯ 19:10)

ಯೇಸು ತನ್ನ ಶಿಷ್ಯರೊಂದಿಗೆ ಪ್ರತ್ಯೇಕವಾಗಿರುವಾಗ,[13] ಶಿಷ್ಯರು ಪ್ರಶ್ನೆಗಳನ್ನು ಮುಂದುವರೆಸಿದರು (ಮಾರ್ಕ 10:10). ಒಬ್ಬನು ತನ್ನ ಹೆಂಡತಿಯನ್ನು ಬಿಡುವ ವಿಚಾರದಲ್ಲಿ ಯೇಸು

ಪುನರಾವರ್ತಿಸಿದನು (ಮಾರ್ಕ 10:11). ಈಗ ಸ್ತ್ರೀಯು ಪುರುಷನನ್ನು ಬಿಟ್ಟು ಬಿಡುವ ವಿಚಾರವನ್ನು ಯೇಸು ಹೇಳಿದನು. "ಒಬ್ಬಳು ತನ್ನ ಗಂಡನಿಗೆ ತ್ಯಾಗ ಪತ್ರವನ್ನು ನೀಡಿ, ಇನ್ನೊಬ್ಬನನ್ನು ಮದುವೆಯಾಗುವದಾದರೆ ಆಕೆಯ ವ್ಯಭಿಚಾರಿಣಿಯಾಗಿರುತ್ತಾಳೆ" (ಮಾರ್ಕ 10:12). ಯೆಹೂದ್ಯರಲ್ಲಿ ಗಂಡನು ತ್ಯಾಗ ಪತ್ರ ನೀಡುವದು ಸಹಜವಾಗಿದ್ದು, ಕೆಲವು ಸಂದಿಗ್ದ ಪರಿಸ್ಥಿತಿಗಳಲ್ಲಿ ಸ್ತ್ರೀ ನ್ಯಾಯಾಲಯದಿಂದ ವಿಶೇಷವಾದ ಅಪ್ಪಣೆಯ ಮೇರೆಗೆ ಪರಿತ್ಯಾಗ ಮಾಡಬಹುದಿತ್ತು.[14] ಅನ್ಯರಲ್ಲಿ ಸ್ತ್ರಿ ಪರಿತ್ಯಾಗ ಮಾಡುವದು ಸಹಜವಾಗಿತ್ತು (ನೋಡಿರಿ 1 ಕೊರಿಂಥ 7:13).[15]

ಆದರೆ ಮದುವೆಯ ನಿತ್ಯವಾದ ಸಂಬಂಧವೆಂದು ಯೇಸು ತಿಳಿಸಿದಾಗ್ಯೂ ಶಿಷ್ಯರು ಒಂದು ಅಂಶವನ್ನು ಮರೆಯಲಿಲ್ಲ. "ಅದಕ್ಕೆ ಅವರು - ಹೆಂಡತಿಯ ವಿಷಯವಾಗಿ ಗಂಡನ ಧರ್ಮ ಹೀಗಿದ್ದರೆ, ಮದುವೆಯಾಗುವದು ಒಳ್ಳೆದಲ್ಲಾ" ಅಂದರು (ಮತ್ತಾಯ 19:10). ಇನ್ನೊಂದು ಅರ್ಥದಲ್ಲಿ, ಅಸಂತೋಷದ ದಾಂಪತ್ಯದ ಜೀವಿತವನ್ನು ಹೊಂದುವದಕ್ಕಿಂತಲೂ ಮದುವೆಯಾಗದೆ ಇರುವುದು ವಿಹಿತವಲ್ಲವೇ ದೇವವಾಕ್ಯದದ ತಿಳುವಳಿಕೆ ಇಲ್ಲದೆ ಲೋಕದವರು. ದಾಂಪತ್ಯ ಬಂದನಕ್ಕೆ ಒಳಗಾಗುವದಕ್ಕಿಂತ, ಹಾದರ ಮಾಡಿಕೊಂಡು, ಬದುಕುವುದೇ ಉತ್ತಮ ಎಂದು ತಿಳಿದಿದ್ದಾರೆ.[16]

## ಯೇಸು ಉತ್ತರಿಸಿದನು (ಮತ್ತಾಯ 19:11, 12)

ಯೇಸು ಪ್ರತ್ಯುತ್ತರ ನೀಡಿ, "ಈ ಮಾತನ್ನು ಅಂಗೀಕರಿಸಲುವ ವರವನ್ನು ಹೊಂದಿದವರೇ ಹೊರತು ಮತ್ತಾರು ಅದನ್ನು ಅಂಗೀಕರಿಸುವದಿಲ್ಲಾ ಅಂದನು" (ವಚನ 11). ಮದುವೆಯಾಗದೆ ಇರುವದು ಉತ್ತಮವಲ್ಲವೇ ಎಂಬ ಶಿಷ್ಯರ ಪ್ರಶ್ನೆಗೆ ಇದು ಉತ್ತರವಾಗಿದೆ. "ಈ ಮಾತನ್ನು ಎಲ್ಲರೂ" ಅಂಗೀಕರಿಸುವದಿಲ್ಲ ಎಂಬ ಕ್ರಿಸ್ತನ ಹೇಳಿಕೆಗೆ, ಎಲ್ಲರು ಶಿಸ್ತಿನ ಜೀವನ ಹೊಂದಲಾರರು ಎಂಬ ಅರ್ಥವಾಗಿದೆ. ಮೊದಲನೆಯದಾಗಿ, ಸ್ವಭಾವ ಸಿದ್ಧವಾಗಿ ದೈಹೀಕ ಸಾಮರ್ಥ್ಯವಿಲ್ಲದವರು (ಲೈಂಗಿಕ ನಿಶಕ್ತಿವುಳ್ಳವರು) ಮತ್ತು ಮನುಷ್ಯರಿಂದ ಒತ್ತಾಯಕ್ಕೆ ಮಣಿದು ಮದುವೆಯ ಬಂಧನಕ್ಕೆ ಒಳಗಾಗದವರು ಮದುವೆಯಾಗದೆ ಇರಬಹುದು (ವೀರ್ಯಗುಂದಿ ಸಲ್ಪಟ್ಟವರು.[17]; ವಚನ 12ಬಿ).

ಅಂತಿಮವಾಗಿ ಆತನು, "ಪರಲೋಕದ ರಾಜ್ಯದ ನಿಮಿತ್ತವಾಗಿ ತಮ್ಮನ್ನು ತಾವೇ ನಪುಂಸಕರಾಗಿ ಮಾಡಿಕೊಂಡವರ ಕುರಿತಾಗಿ ಮಾತಾಡಿದನು" (ವಚನ 12ಸಿ). ಆದರೆ ತಮ್ಮನ್ನು ಉದ್ದೇಶಪೂರ್ವಕವಾಗಿ ನಪುಂಸಕರಾಗಿ ಮಾಡಿಕೊಂಡವರ ಬಗ್ಗೆ ಮಾತಾಡದೆ, ಆ ದೇಹಗಳಿಗೆ ಗೌರವ ಸಲ್ಲಿಸಬೇಕು ಏಕೆಂದರೆ "ಅದು ಗರ್ಭಗುಡಿ"ಯಾಗಿದೆ (ನೋಡಿ 1 ಕೊರಿಂಥ 6:19; ರೋಮಾಪುರ 12:1). ಮದುವೆಯಾಗದೆ ತಮ್ಮನ್ನು ದೇವರ ಮತ್ತು ಮನುಷ್ಯರ ಸೇವೆಗೆ ಸಮರ್ಪಿಸಿಕೊಂಡವರ ಬಗ್ಗೆ ಮಾತಾಡಿದನು (ನೋಡಿ 1 ಕೊರಿಂಥ 7:32-34).[18] "ಅಂಗೀಕರಿಸ ಬಲ್ಲವನು ಅಂಗೀಕರಿಸಲಿ" ಎಂದು ಯೇಸು ಹೇಳಿದನು (ಮತ್ತಾಯ 19:12ಎ). ಅದು ಅವರಿಗೆ, "ನೀಡಲ್ಪಟ್ಟಿಲ್ಲ" (ವಚನ 11). ಶೋಧನೆಗೆ ಒಳಗಾಗದಂತೆ, ಮದುವೆಯಾಗದೆ ಇರಬಹುದು; ಹಾಗೂ ಮದುವೆಯಾಗುವದೂ ಲೇಸು (ನೋಡಿರಿ 1 ಕೊರಿಂಥ 7:2, 7).

ಶಿಷ್ಯರಿಗೆ ಯೇಸು ನೀಡಿದ ಉತ್ತರವನ್ನು, ಇನ್ನೊಂದು ರೀತಿ ವಿವರಿಸಬಹುದು: "ಮದುವೆ ಆಗುವದು ಲೇಸು, ಮದುವೆಯಾಗುವದು ಸುಖ ಸಂಸಾರಕ್ಕಾಗಿ ಎಂಬುದನ್ನು ಮರೆಯ ಬಾರದು!"

## ಮಕ್ಕಳ ಕುರಿತಾಗಿ ಏನು?

## (ಮತ್ತಾಯ 19:13-15; ಮಾರ್ಕ 10:13-16; ಲೂಕ 18:15-17)[19]

**ಮಕ್ಕಳು ವಿಶೇಷವಾದವರು**

ಯೇಸು ವಿಶ್ರಮಿಸುವಾಗ, ತಾಯಂದಿರು ಯೇಸುವಿನ ಬಳಿಗೆ ತಮ್ಮ ಮಕ್ಕಳನ್ನು ಆಶೀರ್ವಾದಕ್ಕಾಗಿ ಕರೆತಂದರು. ಧಾರ್ಮಿಕ ನಾಯಕರುಗಳ ಬಳಿಗೆ ಪ್ರಾರ್ಥನೆಗಾಗಿ ತಾಯಂದಿರು ಮಕ್ಕಳನ್ನು ಕರೆತರುವದು ಅಸಹಜವಾಗಿರಲಿಲ್ಲ.[20]

ಕ್ರಿಸ್ತನ ಶಿಷ್ಯರು ಅವರನ್ನು ಗದರಿಸಿದರು. ಪ್ರಾಯಶಃ ಆ ತಾಯಂದಿರು ಅಡ್ಡಿಪಡಿಸಲು ಬಂದಿದ್ದರೆಂದು ಅವರು ತಿಳಿದಿರಬಹುದು. ಒಂದು ವೇಳೆ ಅವರು ಯೇಸುವನ್ನು ಕಾಯುತ್ತಿರಬಹುದು, ಯಾಕಂದರೆ ತಾವು ಪ್ರಮುಖ ಕಾರ್ಯದಲ್ಲಿ ನಿರತರಾಗಿದ್ದರೆಂಬ ತಿಳಿದಿರಲೂ ಬಹುದು, ಆದ್ದರಿಂದ ಯೇಸು ಯಾಕೆ ತನ್ನ ಸಮಯವನ್ನು ಮಕ್ಕಳೊಂದಿಗೆ ವ್ಯರ್ಥಮಾಡಬೇಕು ಎಂದು ತಿಳಿದರು. ಗದರಿಸಿದವರನ್ನು ಯೇಸು ಗದರಿಸಿದನು: "ಆದರೆ ಯೇಸು - ಮಕ್ಕಳನ್ನು ಬಿಡಿರಿ; ನನ್ನ ಹತ್ತರ ಬರುವದಕ್ಕೆ ಅವುಗಳಿಗೆ ಅಡ್ಡಿಮಾಡಬೇಡಿರಿ; ಪರಲೋಕರಾಜ್ಯವು ಇಂಥವರದೇ ಎಂದು ಹೇಳಿದನು" (ಮತ್ತಾಯ 19:14).

ಕ್ರಿಸ್ತನು ಮಕ್ಕಳಿಗಾಗಿ ಪ್ರಾರ್ಥಿಸಿದ ಕ್ರಿಯೆಯು ಪ್ರತಿ ತಂದೆ ತಾಯಿಗಳಿಗೆ ಸ್ಪರ್ಷವಾಗಿತ್ತು: ಆತನು ಮಕ್ಕಳನ್ನು ತನ್ನ ಕೈಗಳಲ್ಲಿ ತೆಗೆದುಕೊಂಡು,[21] ಅವುಗಳ ಮೇಲೆ ಕೈಯಿಟ್ಟು ಆಶಿರ್ವದಿಸಿದನು.[22] (ಮಾರ್ಕ 1:16). H. I. ಹೆಸ್ಟರ್‌ರವರು ಬರೆದು: ಮಕ್ಕಳಿಗೆ ಯಾವುದೇ ಅವಕಾಶವು ಇರದಿದ್ದರೂ, ಈ ದಿನಗಳಲ್ಲಿ ಅವರನ್ನು ಯೇಸು ಕ್ರಿಸ್ತನ ಬೋಧನೆಗೆ ನೇರವಾಗಿ ತರಬಹುದಾಗಿದೆ.[23] ರಾಬರ್ಟ್ ಕಲ್ಪರ್‌ರವರು ಪ್ರಕಾರ: "ಯೇಸು ಉಪದೇಶ ನೀಡುವವರೆಗೆ ಜನರಲ್ಲಿ ಮಕ್ಕಳು ತಮ್ಮ ಸರಿಯಾದ ಹಕ್ಕನ್ನು ಪಡೆಯಲಿಲ್ಲ."[24]

**ಮಕ್ಕಳಾಂತಗುವದು ಅತಿ ಅವಶ್ಯ**

ಚಿಕ್ಕ ಮಕ್ಕಳ ಹಾಗೆ ಇರಬೇಕೆಂದು ಯೇಸು ಬೋಧಿಸಲು ಆರಂಭಿಸಿದನು. (ಸಂದೇಹ ಪಡದವರು, ಭರವಸವಿರುವವರು, ಹಾಗೂ ಬೋಧನೆ ಕೇಳುವವರು).[25] "ನಿಮಗೆ ಸತ್ಯವಾಗಿ ಹೇಳುತ್ತೇನೆ, ಯಾವನು ಶಿಶುಭಾವದಿಂದ ದೇವರ ರಾಜ್ಯವನ್ನು ಅಂಗೀಕರಿಸುವದಿಲ್ಲವೋ ಅವನು ಅದರಲ್ಲಿ ಸೇರುವದೇ ಇಲ್ಲ ಎಂದು ಹೇಳಿದನು" (ಮಾರ್ಕ 10:15)

ಯೇಸು ಮಕ್ಕಳನ್ನು ಮುಟ್ಟಿ ಆಶೀರ್ವದಿಸಿದನು ಎಂಬದರಲ್ಲಿ "ಮಕ್ಕಳ ದೀಕ್ಷಾಸ್ನಾನವಿದೆ" ಎಂದು ತಿಳಿಯಬಾರದು. ಆದರೆ ಮಕ್ಕಳು ನಿರ್ಮಲರೂ, ಪರಿಶುದ್ಧರೂ ಆಗಿರುವರು ಎಂಬ ತತ್ವ ಇದರಲ್ಲಿ ಅಡಗಿದೆ. ಅವರನ್ನು ಪರಲೋಕಕ್ಕೆ ತರಲು ಮನುಷ್ಯನ ಯಾವುದೇ ವಿಧವಾದ ಸಂಪ್ರದಾಗಳ ಅಗತ್ಯವಿಲ್ಲ.

## ಐಶ್ವರ್ಯದ ಕುರಿತಾದ ವಿಚಾರವೇನು?

## (ಮತ್ತಾಯ 19:16-26; ಮಾರ್ಕ 10:17-27; ಲೂಕ 18:18-27)

**ಶ್ರಿಮಂತನಿಗಾಗಿ ಒಂದು ಸವಾಲು**

**(ಮತ್ತಾಯ 19:16-22; ಮಾರ್ಕ 10:17-22; ಲೂಕ 18:18-23)**

ಮಕ್ಕಳನ್ನು ಆಶೀರ್ವದಿಸಿದ ನಂತರ, ಆತನು ತನ್ನ ಯೆರೂಸಲೇಮನ ಪ್ರಯಾಣವನ್ನು ಆರಂಭಿಸಿದನು (ಮತ್ತಾಯ 19:15). ಈಗ ಒಬ್ಬ ಯೌವನಸ್ಥನು ಆತನನ್ನು ನಿಲ್ಲಿಸಿ ಒಂದು ಪ್ರಶ್ನೆ ಕೇಳಿದನು (ಮಾರ್ಕ 10:17). "ಇವನು ಐಶ್ವರ್ಯವಂಥನು." ಬೇರೆ ವಾಕ್ಯ ಭಾಗಗಳು ಈ

ರೀತಿ ಅವನನ್ನು ವರ್ಣಿಸದೆ, ಲೂಕ 18:18ರಲ್ಲಿ ಮಾತ್ರ ಅವನನ್ನು ಒಬ್ಬ ಅಧಿಕಾರಿ[26] ಎಂದು ನೋಡುತ್ತೇವೆ. ಮತ್ತಾಯ 19, 20, 22 ಅವನನ್ನು ಯೌವನಸ್ಥನು ಎಂದಿದ್ದರೆ, ಇತರೆ ಮೂರು ಸುವಾರ್ತೆಗಳಲ್ಲಿ ಅವನು ಐಶ್ವರ್ಯವಂಥನು ಎಂದಿದೆ (ಲೂಕ 18:23; ನೋಡಿ ಮತ್ತಾಯ 19:22; ಮಾರ್ಕ 10:22).

ಆತನು ಹೊರಟು ದಾರಿಹಿಡಿದು ಹೋಗುವಾಗ ಒಬ್ಬನು ಓಡುತ್ತಾ "ಆತನ ಎದುರಿಗೆ ಬಂದು ಮೊಣಕಾಲೂರಿ - ಒಳ್ಳೇ ಬೋಧಕನೇ, ನಾನು ನಿತ್ಯಜೀವಕ್ಕೆ ಬಾಧ್ಯಸ್ಥನಾಗಬೇಕಾದರೆ ಏನು ಮಾಡಬೇಕೆಂದು ಆತನನ್ನು ಕೇಳಲಾಗಿ?" (ಮಾರ್ಕ 10:17).[27] ಅದಕ್ಕೆ ಯೇಸು ನನ್ನನ್ನು ಒಳ್ಳೆಯವನೆಂದು ಯಾಕೆ ಹೇಳುತ್ತಿ? ದೇವರೊಬ್ಬನೇ ಹೊರತು ಮತ್ತಾವನೂ ಒಳ್ಳೆಯವನಲ್ಲಾ (ಮಾರ್ಕ 10:18). ಯೇಸು ತಾನು ದೇವರಲ್ಲಾ ಎಂದು ಹೇಳುತ್ತಿರುವದಿಲ್ಲಾ. ಆದರೆ ಆ ಯೌವನಸ್ಥನು "ಒಳ್ಳೆಯವನು" ಎಂಬುದರ ಅರ್ಥವನ್ನು ಅರಿಯಬೇಕೆಂದು ಯೇಸು ಬಯಸಿದನು. ಕ್ರಿಸ್ತನು ಒಳ್ಳೆಯವನೆಂದು ಅವನು ತಿಳಿದಿದ್ದರೆ, "ಯೇಸು, ಮಾನವನಾಗಿರುವ ದೇವರು ಎಂದು ತಿಳಿಯ ಬಯಸಿದನು (ಯೋಹಾನ 1:1, 14; ಮತ್ತಾಯ 1:23). ಅಂದರೆ ಕ್ರಿಸ್ತನು ಅವನಿಗೆ ನೀಡುವದಕ್ಕಿದ್ದ ಸವಾಲನ್ನು ಎದುರಿಸುವ ನಂಬಿಕೆಯನ್ನು ಅವನು ಹೊಂದಬೇಕೆಂದು ಬಯಸಿದನು.

ನಂತರ, ನಿತ್ಯ ಜೀವವನ್ನು ಹೊಂದುವ ಪ್ರಶ್ನೆಗೆ ಪ್ರತಿಕ್ರಿಯೆ ನೀಡಿದನು. ಆತನು ಪ್ರಚಲಿತವಿದ್ದ ಮೋಶೆಯ ನಿಯಮದ ಕಡೆಗೆ ದೃಷ್ಟಿ ಹರಿಸಿದನು.[28] ದಶಾಜ್ಞೆಯ, ಐದು ಅಪ್ಪಣೆಗಳನ್ನು ನೆನಪು ಮಾಡಿದನು: "ವ್ಯಭಿಚಾರ ಮಾಡಬಾರದು, ನರಹತ್ಯ ಮಾಡಬಾರದು, ಕದಿಯಬಾರದು ಸುಳ್ಳು ಸಾಕ್ಷಿ ಹೇಳಬಾರದು, ನಿನ್ನ ತಂದೆ ತಾಯಿಗಳನ್ನು ಸನ್ಮಾನಿಸಬೇಕು" (ಲೂಕ 18:20; ನೋಡಿ ವಿಮೋಚನಕಾಂಡ 20:12-16; ಧರ್ಮೋಪದೇಶಕಾಂಡ 5:16-20).[29] "ನಿತ್ಯ ಜೀವಪಡೆಯಬೇಕೆಂದರೆ, ದೇವರು ಹೇಳಿದ್ದನ್ನು ಮಾಡು ಎಂಬ ಅರ್ಥವಾಗಿದೆ," ಅದಕ್ಕವನು - ನಾನು ಚಿಕ್ಕಂದನಿಂದಲೂ ಇವೆಲ್ಲಕ್ಕೂ ಸರಿಯಾಗಿ ನಡಕೊಂಡು ಬಂದಿದ್ದೇನೆ ನಾನು ಮತ್ತೇನು ಮಾಡಬೇಕು? (ಮಾರ್ಕ 10:20; ಮತ್ತಾಯ 19:20ಬಿ).

ಹೃದಯಗಳನ್ನು ಪರಿಶೀಲಿಸುವ ಕ್ರಿಸ್ತನು, ಆ ಐಶ್ವರ್ಯವಂಥನಲ್ಲಿದ್ದ ಒಳ್ಳೆಯ ಹಾಗೂ ಸರಿಯಾದ ಮನೋಭಾವದ ಸಾಮರ್ಥ್ಯವನ್ನು ನೋಡಿದನು. ಮಾರ್ಕನ ಪ್ರಕಾರ, "ಯೇಸು ಅವನನ್ನುನೋಡಿ ಪ್ರೀತಿಸಿದನು" (ಮಾರ್ಕ 10:21ಎ; KJV). ಅವನು ವಿಶೇಷವಾದ ಯೌವನಸ್ಥನಾಗಿದ್ದನು. ಆದ್ದರಿಂದ ಕರ್ತನು ಅವನಿಗೆ, "ಇನ್ನು ನಿನಗೆ ಬಂದು ಕಡಿಮೆಯಾಗಿದೆ" ಅಂದನು.[30] ನಿನ್ನ ಬದುಕನ್ನೆಲ್ಲಾ ಮಾರಿ ಬಡವರಿಗೆ ಕೊಡು ಪರಲೋಕದಲ್ಲಿ ನಿನಗೆ ಸಂಪತ್ತಿರುವರು"[31] ನೀನು ಬಂದು ನನ್ನನ್ನು ಹಿಂಬಾಲಿಸು.[32] (ಮಾರ್ಕ 10:21ಬಿ).

"ನಿನ್ನ ಬದುಕನ್ನೆಲ್ಲಾ ಮಾರಿ ಬಡವರಿಗೆ ಹಂಚಿಬಿಟ್ಟು ಶಿಷ್ಯನಾಗು ಎಂಬುದು ಸಾರ್ವತ್ರಿಕ ಅಪ್ಪಣೆಯಾಗಿರುವದಿಲ್ಲ.[33] ಇದು ಸತ್ಯವಾಗಿದ್ದರೆ, ಯೌವನಸ್ಥನಿಗೆ ಏಕೆ ಯೇಸು ಈ ಅಪ್ಪಣೆ ನೀಡಿದನು? ಇದರಲ್ಲಿ ಎರಡು ಸಾಧ್ಯತೆಗಳಿವೆ:

(1) ಕ್ರಿಸ್ತನು ಅವನ ಮನಸ್ಸಿನಲ್ಲಿದ್ದ "ದುರಾಶೆ" ಎಂಬ ಪ್ರಾಥಮಿಕ ಸಂಗತಿಯನ್ನು ನೋಡಿದನು. ದಶಾಜ್ಞೆಗಳ ಐದು ಆಜ್ಞೆಗಳು, ನೆರೆಯವನನ್ನು ಹೇಗೆ ನಡೆಸಬೇಕೆಂಬ ತಾತ್ಪರ್ಯವನ್ನು ಹೊಂದಿರುತ್ತೇವೆ, ಈ ಆರರಲ್ಲಿ ಯೇಸು ಯಾವದನ್ನು ತಿಳಿಸಲಿಲ್ಲ? (ವಿಮೋಚನಕಾಂಡ 20:17; ಧರ್ಮೋಪದೇಶಕಾಂಡ 5:21).[34] ಅರ್ಥ ಕಠಿಣವಾಗಿದೆ; ನಿತ್ಯತ್ವ ಮತ್ತು ಆ ಅಧಿಕಾರಿಯ ನಡುವೆ "ಆಶಿಸುವ" ಸಂಗತಿ ಅಡ್ಡಿಯಾಯಿತು. ಕ್ರಿಸ್ತನು ತನ್ನ ಶಿಷ್ಯರಲ್ಲಿ ಅಡ್ಡಿಪಡಿಸುವ ಯಾವುದೇ ಸಂಗತಿಗಳು ಇರಬಾರದೆಂದು ಕ್ರಿಸ್ತನು ಹೇಳಿದನು (ನೋಡಿ ಮತ್ತಾಯ 5:29, 30; 18:8, 9). ಎಲ್ಲವನ್ನು ಮಾರಿ ಬಡವರಿಗೆ ನೀಡುವದು, ಸಾರ್ವತ್ರಿಕ ಆಜ್ಞೆಯಲ್ಲ, ಆದರೆ "ಅನಿಶ್ಚಯವಾದ ಐಶ್ವರ್ಯದಲ್ಲಿ" (1 ತಿಮೋಥೆ 6:17).

ಭರವಸವಿಟ್ಟಿರುವವರಿಗೆ ಈ ಮಾತು ಅನ್ವಯಿಸುತ್ತದೆ.

(2) ಯೇಸು ಅವನನ್ನು ಪ್ರೀತಿಸಿ, ಅವನಲ್ಲಿದ್ದ ಸಾಮರ್ಥ್ಯವನ್ನು ಅರಿತುಕೊಂಡನು. ಆ ಶ್ರೀಮಂತನು ಎಲ್ಲವನ್ನು ಮಾರಿ, ಶಿಷ್ಯನಾಗಬೇಕೆಂಬ ತತ್ವವನ್ನೇ ಯೇಸು ತಿಳಿಸಿದನು (ಮತ್ತಾಯ 19:27; ಇದೇ ವಿಧವಾದ ಸಂಗತಿ).[35]

ಕ್ರಿಸ್ತನ ಈ ಸವಾಲನ್ನು ಆ ಯೌವಸ್ಥನು ಹೇಗೆ ಅಂಗಿಕರಿಸಿದನು? ಲೂಕನು ಬರೆದು, "ಅವನು ಇದನ್ನು ಕೇಳಿ ಬಹು ವ್ಯಸನಗೊಂಡನು" (ಲೂಕ 18:23ಎ) ASV ಪ್ರಕಾರ, "ಅವನು ಹೆಚ್ಚಾದ ಆಸ್ತಿಯನ್ನು ಹೊಂದಿದರಿಂದ ದುಃಖದಿಂದ ಹೊರಟುಹೋದನು" (ಮಾರ್ಕ 10:22). ಬೇರೆ ತೆತ್ತದೆ, ನಿತ್ಯತ್ವ ಪಡೆಯಲು ಬಯಸಿದನು.

### ಸಕಲ ಐಶ್ವರ್ಯವಂಥವರಿಗೂ ಒಂದು ಸವಾಲು
### (ಮತ್ತಾಯ 19:23-26; ಮಾರ್ಕ 10:23-27; ಲೂಕ 18:24-27)

ಆ ಮನುಷ್ಯನು ಹೊರಟು ಹೋಗುವದನ್ನು ಕ್ರಿಸ್ತನು ನೋಡಿ (ಲೂಕ 18-24). ಆತನ ಹೃದಯ ಭಾರವಾಯಿತು, ನಂತರ ಆತನು ತನ್ನ ಶಿಷ್ಯರಿಗೆ, "ಧನವಂತರು ದೇವರ ರಾಜ್ಯದಲ್ಲಿ ಸೇರುವದು ಎಷ್ಟೋ ಕಷ್ಟ ಅಂದನು" (ಮಾರ್ಕ 10:23). ಒಂದು ಮುಖ್ಯಾಂಶವನ್ನು ತಿಳಿಸಲು, "ಒಂಟೆಯು ಸೂಜಿ ಕಣ್ಣಿನಲ್ಲಿ ನುಗ್ಗಿ ಹೋಗುವದು ಸುಲಭ" ಎಂದು ಹೇಳಿದನು (ಮಾರ್ಕ 10:25). ಸೂಜಿಯ ಕಣ್ಣಿನಂತಿರುವ ಪಟ್ಟಣದ ಬಾಗಿಲನು ಉದಾಹರಣೆಗೆ ನೀಡಿರಬಹುದು. ಧಾರ್ಮಿಕ ಬರಹಗಾರರ ವಿವರಣೆಯ ಬರಹವಾಗಿದೆ.[36] "ಮನುಷ್ಯನಿಗೆ ಅಸಾಧ್ಯವಾದದ್ದು, ದೇವರಿಗೆ ಸಾಧ್ಯವಾಗಿದೆ (ಲೂಕ 18:27), "ಸೂಜಿಯ ಕಣ್ಣಿನಲ್ಲಿ ನುಗುವದು," ದೇವರಿಗೆ ಸಾಧ್ಯ ಎಂಬ ಸೂಚನೆಯ ಅದಕ್ಕೆ ಶಿಷ್ಯರು ಹಾಗಾದರೆ, "ಯಾರಿಗೆ ರಕ್ಷಣೆಯಾದೀತು?" ಮತ್ತಾಯ (19:25). ಶ್ರೀಮಂತಿಕೆಯು, ದೇವರ ಒಪ್ಪುವಿಕೆಯ ಪುರಾವೆ ಎಂದು ಯೆಹೂದ್ಯರು ತಿಳಿದಿದ್ದರು. "ಒಂದು ವೇಳೆ ಶ್ರೀಮಂತನು ರಕ್ಷಿಸಲ್ಪಡದಿದ್ದರೆ, ಇತರರಿಗೂ ರಕ್ಷಣೆಯಿಲ್ಲ ಎಂದು ಅವರು ಭಾವಿಸಿದ್ದರು. ಕ್ರಿಸ್ತನು ಅದಕ್ಕೆ ಉತ್ತರಿಸಿ ಮನುಷ್ಯರಿಗೆ ಅಸಾಧ್ಯವಾದ ಕೆಲಸಗಳು ದೇವರಿಗೆ ಸಾಧ್ಯವಾಗಿವೆ" ಅಂದನು (ಮತ್ತಾಯ 19:26; ಯೋಬನು 42:2). ಸೂಜಿಯ ಕಣ್ಣಿನಲ್ಲಿ ಒಂಟೆಯು ನುಸುಳುವಂತೆ ಮಾಡಲು ದೇವರಿಗೆ ಸಾಧ್ಯವಿದೆ. ಶ್ರೀಮಂತನು ಮಾನಸಾಂತರ ಪಡುವದಾದರೆ, ದೇವರು ಅವನನ್ನು ಬದಲಿಸಲು ಸಾಧ್ಯವಿದೆ (ನೋಡಿ 1 ತಿಮೋಥೆ 6:9, 10, 17-19).

## ಬಹುಮಾನದ ವಿಚಾರವೇನು?

## (ಮತ್ತಾಯ 19:27-20:16; ಮಾರ್ಕ 10:28-31; ಲೂಕ 18:28-30)

### ಬಹುಮಾನ ಖಂಡಿತವಾಗಿ ದೊರೆಯುತ್ತದೆ
### (ಮತ್ತಾಯ 19:27-29; ಮಾರ್ಕ 10:28-30; ಲೂಕ 18:28-30)

ತನ್ನ ಐಶ್ವರ್ಯವನ್ನು ತ್ಯಜಿಸಿ, ಆತನನ್ನು ಹಿಂಬಾಲಿಸಬೇಕು ಎಂದು ಯೇಸು ಹೇಳಲು, ಆ ಮನುಷ್ಯನು ಆ ಕರೆಯನ್ನು ತಿರಸ್ಕರಿಸಿದ್ದನು. ಇದಕ್ಕೆ ಪ್ರತ್ಯುತ್ತರವಾಗಿ ಶಿಷ್ಯರು ಆತನ ಕರೆಯನ್ನು ಮನ್ನಿಸಿದ್ದರು (ನೋಡಿ ಮತ್ತಾಯ 4:18-22; ಲೂಕ 5:11, 27, 28). ಆದ್ದರಿಂದ ಪೇತ್ರನು, "ಇಗೋ, ನಾವು ಎಲ್ಲವನ್ನು ಬಿಟ್ಟು ಬಿಟ್ಟು ನಿನ್ನನ್ನು ಹಿಂಬಾಲಿಸಿದೆವು ನಮಗೆ ಏನು ದೊರಕುವದು? ಅಂದರು (ಮತ್ತಾಯ 19:27).

ದೇವರನ್ನು ಹಿಂಬಾಲಿಸುವದರಿಂ ಆಶೀರ್ವಾದ ದೊರೆಯುವದು ಎಂಬುದು ಕೆಲವರ ಅಭಿಪ್ರಾಯವಾಗಿದೆ. ಕರ್ತನನ್ನು ಹಿಂಬಾಲಿಸುವದು ಈ ಕಾರಣದಿಂದ ಮಾತ್ರವಲ್ಲ (1 ಕೊರಿಂಥ 13:1-3). ಬಹುಮಾನದ ಕುರಿತು ಸತ್ಯವೇದವು ಮಹತ್ವದ ಸಂಗತಿಯನ್ನು

ತಿಳಿಸುತ್ತದೆ (ಮತ್ತಾಯ 5:12; 6:4, 5; 10:41, 42; 1 ಕೊರಿಂಥ 3:7; 2 ಯೋಹಾನ 8). ಅಪೊಸ್ತಲರಿಗೆ ದೊರೆಯುವ ನಿಖರವಾದ ಬಹುಮಾನಗಳ ಬಗ್ಗೆ ಕ್ರಿಸ್ತನು ತಿಳಿಸಿ: ಹೊಸ ಸೃಷ್ಟಿಯಲ್ಲಿ ಮನುಷ್ಯಕುಮಾರನು ತನ್ನ ಮಹಿಮೆಯ ಸಿಂಹಾಸನದ ಮೇಲೆ ಕೂತುಕೊಳ್ಳುವಾಗ ನನ್ನನ್ನು ಹಿಂಬಾಲಿಸಿರುವ ನೀವು ಸಹ ಹನ್ನೆರಡು ಸಿಂಹಾಸನಗಳ ಮೇಲೆ ಕೂತುಕೊಂಡು ಇಸ್ರಾಯೇಲಿನ ಹನ್ನೆರಡು ಕುಲಗಳಿಗೆ ನ್ಯಾಯ ತೀರಿಸುವಿರಿ" (ಮತ್ತಾಯ 19:28).

ಮೆಸ್ಸೀಯನ ಆಳ್ವಿಕೆಯನ್ನು "ಹೊಸದಾದ ಸೃಷ್ಟಿ" ಎಂದು ಯೆಹೂದ್ಯರು ತಿಳಿದಿದ್ದರು. NIVಯಲ್ಲಿ "ನೂತನ ಸೃಷ್ಟಿ" ಎಂದಿರುತ್ತದೆ.[37] ಇದು ಸಾವಿರ ವರ್ಷಗಳ ಆಳ್ವಿಕೆಯ ವಿಚಾರ ವಾಗಿರುವದಿಲ್ಲ, ಹಾಗೂ ಪುನರುತ್ಥಾನದ ನಂತರ ಸಭೆಯೆಂಬ ದೇವರ ರಾಜ್ಯದ ಕುರಿತಾದ ವಿಚಾರವಲ್ಲಾ (ಅಪೊಸ್ತಲರ ಕೃತ್ಯಗಳು 2).[38] ಕ್ರಿಸ್ತನು ಸಿಂಹಾಸನವೇರುವಾಗ, ಮಾತ್ರ ಹೊಸದಾದ ಸೃಷ್ಟಿಯಾಗುತ್ತದೆ. ಯೇಸು ತನ್ನ ತಂದೆಯ ನಿತ್ಯತ್ವವನ್ನು ಹೊಂದುವಾಗ ಆತನಿಗೆ ಕಿರೀಟದಾರಣೆಯಾಗುತ್ತದೆ (ಅಪೊಸ್ತಲರ ಕೃತ್ಯಗಳು 2:33-35). ಈಗ ಆತನು ತನ್ನ ಸಭೆಯೆಂಬ ರಾಜ್ಯವನ್ನು ಆಳುತ್ತಿದ್ದಾನೆ (1 ಕೊರಿಂಥ 15:24-28; ಕೊಲಸ್ಸೆ 1:13); ಮತ್ತು ಅದು ಸಭೆಯಾಗಿದೆ (ಮತ್ತಾಯ 16:18, 19).

ಯೇಸುವಿನ "ಶಿಷ್ಯರು ಹನ್ನೆರಡು ಸಿಂಹಾಸನಗಳ ಮೇಲೆ ಕೂತುಕೊಂಡು ಇಸ್ರಾಯೇಲ್ಯರಿಗೆ, "ನ್ಯಾಯತೀರಿಸುವರು" ಎಂದು ಪ್ರೇರಿತ ವಾಕ್ಯ ಹೇಳುತ್ತದೆ (ನೋಡಿ ಯೋಹಾನ 12:48).

ನಂತರದಲ್ಲಿ, ಆತನನ್ನು ಹಿಂಬಾಲಿಸುವ ಪ್ರತಿಯೊಬ್ಬರಿಗೆ ವಿಧವಿಧವಾದ ಬಹುಮಾನ ದೊರಕುತ್ತದೆ ಎಂದು ಯೇಸು ಹೇಳಿದನು: "ಮತ್ತು ನನ್ನ ಹೆಸರಿನ ನಿಮಿತ್ತ ಮನೆಗಳನ್ನಾಗಲಿ ಅಣ್ಣತಮ್ಮಂದಿರನ್ನಾಗಲಿ ಅಕ್ಕತಂಗಿಯರನ್ನಾಗಲಿ ತಂದೆಯನ್ನಾಗಲಿ ತಾಯಿಯನ್ನಾಗಲಿ ಮಕ್ಕಳನ್ನಾಗಲಿ ಭೂಮಿಯನ್ನಾಗಲಿ ಬಿಟ್ಟುಬಿಟ್ಟರುವವರೆಲ್ಲರಿಗೆ ಅನೇಕ ಪಾಲು ಹೆಚ್ಚಾಗಿ ಸಿಕ್ಕುವದು; ಮತ್ತು ಅವರು ನಿತ್ಯ ಜೀವಕ್ಕೆ ಬಾದ್ಯರಾಗುವರು" (ಮತ್ತಾಯ 19:29). ಕೆಲವು ಉತ್ತೇಜನದ ವಾಗ್ದಾನಗಳು ಇಲ್ಲಿವೆ.

(1) ಆತನ ಒಂದು ಉದ್ದೇಶವನ್ನು ಈಡೇರಿಸುವ ಸಲುವಾಗಿ ಕೆಲವು ತ್ಯಾಗಗಳನ್ನು ಮಾಡಬೇಕಿತ್ತು. "ನನ್ನ ಹೆಸರಿನ ನಿಮಿತ್ತ ಎಂದು ಮತ್ತಾಯನು ಹೇಳಿದ್ದಾನೆ" (ಮತ್ತಾಯ 19:29). ಮಾರ್ಕನು ಇದನ್ನು "ಸುವಾರ್ತೆ ಹಾಗೂ ನನ್ನ ನಿಮಿತ್ತ" (ಮಾರ್ಕ 10:29). ಲೂಕನು, "ದೇವರ ರಾಜ್ಯದ ನಿಮಿತ್ತವಾಗಿ" (ಲೂಕ 18:29).

(2) ಅಂತಹ ತ್ಯಾಗ ಮಾಡುವವರಿಗೆ, ಈ ಜೀವಿತದಲ್ಲಿಯೂ ಬಹುಮಾನಗಳುಂಟು ಮಾರ್ಕನ ಪ್ರಕಾರ, "ನೂರರಷ್ಟು" ಪಡೆಯುವರು (ಮಾರ್ಕ 10:30). ಅಂದರೆ ಒಬ್ಬ ತಾಯಿ ತನ್ನ ಮಗುವಿಗೆ, "ನೂರು ಸಾರಿ ಹೇಳಿದೆ ನಿನಗೆ" ಎಂಬ ಹೇಳಕೆಯಾಗಿದೆ. ಈ ಹೇಳಿಕೆಯ ನಿಮಿತ್ತವಾಗಿ ಯಾರು ಸಹ ತಮ್ಮ ಕುಟುಂಬದಿಂದ ಪ್ರತ್ಯೇಕವಾಗಬಾರದು. ದೇವರ ಕುಟುಂಬವಾದ ಸಭೆಯಲ್ಲಿ (1 ತಿಮೋಥೆ 3:15). ನೂರಾರು ಜನ ಸಹೋದರಿಯರೂ ಹಾಗೂ ಸಹೋದರರೂ ಇದ್ದಾರೆ - ಹಾಗೂ ಅವರಿಗಾಗಿ ಚಿಂತಿಸುವ ತಾಯಂದಿರೂ ಇದ್ದಾರೆ.[41]

(3) ತಪ್ಪಾದ ಅಭಿಪ್ರಾಯದಿಂದ ಯಾರೂ ಸಹ ಯೇಸುವನ್ನು ಹಿಂಬಾಲಿಸಬಾರದು ಎಂದು ಯೇಸು ಬಯಸುತ್ತಾನೆ. ಆದ್ದರಿಂದ "ಹಿಂಸೆಗಳ ಸಂಗಡ" ಎಂಬ ಹೇಳಿಕೆಯನ್ನು (ಮಾರ್ಕ 10:30; ಮತ್ತಾಯ5:10-12; ಅಪೊಸ್ತಲರ ಕೃತ್ಯಗಳು 14:22; 2 ತಿಮೋಥೆ 3:12) ಗಮನಿಸುತ್ತೇವೆ. ಈ ಲೋಕದಲ್ಲಿ ಯಾವಾಗಲೂ ಕಹಿಯೊಂದಿಗೆ, ಸಿಹಿಯೂ ಇರುತ್ತದೆ.

(4) ಪರಲೋಕದಲ್ಲಿ ಅತ್ಯಧಿಕವಾದ ಬಹುಮಾನವು ದೊರೆಯುತ್ತದೆ: ಅದು ನಿತ್ಯ ಜೀವವೇ (ಲೂಕ 18:30). ಕ್ರೈಸ್ತನಾಗಿರುವದರಿಂದ ದೊರೆಯುವ ಬಹುಮಾನದ ಕುರಿತು ನನ್ನ ಸ್ನೇಹಿತನು ಒಂದು ಸಂದೇಶವನ್ನು ಹೊಂದಿದ್ದಾನೆ. ಅದನ್ನು ಅವನು, "ಈ ಎಲ್ಲವೂ ಮತ್ತು ಪರಲೋಕವು" ಎಂದು ಕರೆದಿದ್ದಾನೆ!

## ಶ್ರಮಿಸದೆ ದೊರೆಯುವ ಬಹುಮಾನಗಳು

## (ಮತ್ತಾಯ 19:30-20:16; ಮಾರ್ಕ 10:31)

ಬಹುಮಾನದ ಕುರಿತ ಪ್ರಸಂಗವನ್ನು ಯೇಸು ಅಂತ್ಯಗೊಳಿಸಿರುವದಿಲ್ಲ (ನಮ್ಮ ಹಾಗೆ) ಆತನ ಶಿಷ್ಯರು ಸಹ ಇನ್ನೊಂದು ಅಂಶವನ್ನು ತಿಳಿಯಬೇಕಿತ್ತು. ತ್ಯಾಗ ಮತ್ತು ಕ್ರಿಸ್ತನೊಂದಿಗಿನ ವಿಶೇಷ ಸಂಬಂಧದ ನಿಮಿತ್ತವಾಗಿ, ಬಹುಮಾನವನ್ನು ಹೊಂದಲು ಅಪೊಸ್ತಲರು ಮೊದಲಿಗರಾಗಿದ್ದರು. ಆದರೆ ಅದಕ್ಕೆ ಒಂದು ನಿಯಮವಿತ್ತು (ನೋಡಿ ಲೂಕ 13:30). "ಕಡೇಯವರಾಗುವರು. ಕೆಲವರು ಮೊದಲಿಗರಾಗಿರುವರು, ಮೊದಲಿನವರು ಕಡೇಯರಾಗುವರು" (ಮತ್ತಾಯ 19:30). ಲೈಟ್ ಫುಟ್‌ರವರು ಇದನ್ನು "ವಿವರಿಸಲಾರದ ಸಾಮ್ಯ" ಎಂದಿರುವರು[42] (ಮತ್ತಾಯ 20:16).

ಮತ್ತಾಯ 20:1-16 ಒಂದು ಸಾಮ್ಯ: ಒಬ್ಬ ಯಜಮಾನನು ಆಳುಗಳನ್ನು ಕರೆಯಲು ಬೆಳಿಗ್ಗೆ (ಪ್ರಾಯಶ ಮುಂಜಾನೆ 6 ಘಂಟೆ) (ಮತ್ತಾಯ 20:1). ಆಗಸ್ಟ್‌ನ ಕಡೇಯವಾರ ಅಥವಾ ಸೆಪ್ಟೆಂಬರ್ ಮೊದಲವಾರ ದ್ರಾಕ್ಷೆಯ ಸುಗ್ಗಿಯಾಗುತ್ತಿತ್ತು. ಅವುಗಳು ಹಣ್ಣಾದ ತಕ್ಷಣ ಕೊಯ್ಯಬೇಕಿತ್ತು. ಆ ಯಜಮಾನನು ಆಳುಗಳನ್ನು ಹುಡುಕುತ್ತಾ ಸಂತೆಯಬಳಿ ಹೋಗಿರಬಹುದು (ನೋಡಿ ವಚನ 3). "ಅಲ್ಲಿ ಆಳುಗಳು ಕೆಲಸಕ್ಕಾಗಿ ಕಾಯುತ್ತಿದ್ದರು,[43] ಅಲ್ಲಿ ಆಳಿಗೆ ಒಂದು ಪಾವಲಿಯಂತೆ ಗೊತ್ತು ಮಾಡಿದನು" (ವಚನ 2).[44]

ಅವನಿಗೆ ಹೆಚ್ಚಿನ ಆಳುಗಳ ಅಗತ್ಯವಿತ್ತು. ಆದ್ದರಿಂದ ಮೂರನೇ ತಾಸು ಒಂಬತ್ತು ಘಂಟೆಗೆ ಅವನು ಪುನ ಅಲ್ಲಿಗೆ ಹೋದನು (ವಚನ 3). ನಂತರ ಆರನೆಯ ತಾಸು (ಮದ್ಯಾಹ್ನ ಮೂರು ಘಂಟೆ) (ವಚನ 3) ಪ್ರತಿ ಸಾರಿ ಅವನು ಹೆಚ್ಚು ಆಳುಗಳನ್ನು ಕರೆದು "ನಿಮಗೆ ಸರಿಯಾದ ಕೂಲಿಯನ್ನು ಕೊಡುತ್ತೇನೆ" ಎಂದು ಹೇಳಿಕಳುಹಿಸಿದನು (ವಚನ 4). ಕಡೇಯ ಸಾರಿ ಅವನು ಹನ್ನೊಂದನೇ ತಾಸಿಗೆ (ಐದು ತಾಸು) ಹೋಗಿ ಸುಮ್ಮನೇ ನಿಂತಿದ್ದವರನ್ನು (ವಚನ 6) ಕೇಳಲು "ಯಾರೂ ನಮ್ಮನ್ನು ಕೂಲಿ" ಕರೆಯಲಿಲ್ಲ ಅಂದರು,[45] ನನ್ನ ತೋಟಕ್ಕೆ ಹೋಗಿರಿ, ಅಂದನು (ವಚನ 7).

"ಸಂಜೆ ಹೊತ್ತಿಗೆ" (ಆರು ತಾಸು) ಪಾರು ಪತ್ಯಗಾರನಿಗೆ ಅವರಿಗೆ ಕೂಲಿಯನ್ನು ನೀಡಲು ಹೇಳಿದನು (ವಚನ 8). ಮೋಶೆಯ ನಿಯಮದ ಪ್ರಕಾರ, ಕೂಲಿಯವನಿಗೆ, ಆ ದಿನ ಸಾಯಂಕಾಲವೇ ಕೂಲಿಯನ್ನು ನೀಡಬೇಕಿತ್ತು (ಯಾಜಕಕಾಂಡ 19:13; ಧರ್ಮೋಪದೇಶ ಕಾಂಡ 24:15). "ಆಗ ಸಾಯಂಕಾಲ ಐದು ಘಂಟೆಗೆ ಬಂದವರಿಗೆ ಒಂದೊಂದು ಪಾವಲಿ ದೊರೆಯಿತು" (ಮತ್ತಾಯ 20:9, 10). ಕೆಲವರು ಇದರ ಕುರಿತು ಗುಣಗುಟ್ಟಲು (ವಚನಗಳು 11, 12), ಅವರೆಲ್ಲರಿಗೆ ವಾಗ್ದಾನಮಾಡಲ್ಪಟ್ಟಂತೆ ನೀಡಲಾಗಿದೆ ಎಂದು ಯಜಮಾನನು ಹೇಳಿದನು. ನನ್ನ ಬದುಕನನ್ನು ನಾನು ಬೇಕಾದ ಹಾಗೆ ಮಾಡಬಹುದಲ್ಲವೇ ಅಂದನು (ವಚನಗಳು 13-15[46]).

ಕ್ರೈಸ್ತರಾಗಲು ಗಳಿಗೆಯವರೆಗೆ ಕಾದುಕೊಳ್ಳಬೇಕು ಎಂದು ಇಲ್ಲಿ ಉತ್ತೇಜನ ನೀಡುತ್ತಿರುವದಿಲ್ಲ. ಹನ್ನೊಂದನೇ ತಾಸಿನಲ್ಲಿ ಕರೆಯಲ್ಪಟ್ಟ ಆಳುಗಳು ತಕ್ಷಣವೇ ಕೆಲಸವನ್ನು ಆರಂಭಿಸಿದರು. ವರ್ಷಗಳ ಕಾಲ ದೇವರ ರಾಜ್ಯಕ್ಕೆ ಸೇರುವಂಥ ಸುವಾರ್ತೆಯನ್ನು ಕೇಳಿ, ವೃದ್ಯಾಪ್ಯವಾದ ನಂತರ ಕರ್ತನ ಕಡೆಗೆ ಬರುವವರ ಕುರಿತು ಈ ಮಾತನ್ನು ಬರೆದಿರುವದಿಲ್ಲ. ಈ ರೀತಿ ಕಾಯುವಂಥದ್ದು ಯಾವಾಗಲೂ ಅಪಾಯಕಾರಿ, ಹನ್ನೊಂದನೇ ತಾಸಿನಲ್ಲಿ ಕ್ರೈಸ್ತನಾಗುವೆನೆಂದು ಭಾವಿಸುವವರನ್ನು ಹತ್ತನೇ ತಾಸಿನಲ್ಲಿಯೇ ಸಾಯುವನು ಎಂಬ ಪ್ರತೀತಿ ಇದೆ. ಅಲ್ಲಿಯವರೆಗೂ ಬದುಕಿದ್ದರೂ ಅಷ್ಟರಲ್ಲಿ ಅವರು ಸುವಾರ್ತೆಯ ಕುರಿತು ಕಠಿಣರಾಗಿರುತ್ತಾರೆ (ಇಬ್ರಿಯ 3:13; 6:6). ಸುವಾರ್ತೆಯ ಮೂಲಕ ಕರೆಯಲ್ಪಟ್ಟ ತಕ್ಷಣ (2 ಥೆಸಲೊನೀಕ 2:14). ಅವನು ಪ್ರತಿಕ್ರಯಿಸಬೇಕು.

ಅಂದರೆ "ಕೆಲಸ ಮಾಡಿದಷ್ಟು ಪ್ರತಿಫಲವಲ್ಲ" ಎಂಬ ತತ್ವವನ್ನು ಅಪೊಸ್ತಲರಿಗೆ

ತಿಳಿಸುವಂಥ ವಿಚಾರವಾಗಿದೆ. ಕೆಲಸದಿಂದ ಬಹುಮಾನ ದೊರೆಯದು: ಸರ್ವಶಕ್ತನಾದ ದೇವರ ಕರುಣೆಯಿಂದಲೇ ಅದು ದೊರೆಯುವಂಥದ್ದಾಗಿದೆ.

ದೇವರ ರಾಜ್ಯದಲ್ಲಿ "ಮೊದಲಾಗಿದ್ದೇನೆ" ಎಂಬುವರು, "ಕಡೇಯುವವರಾಗಿದ್ದಾರೆ" ಅವರ ದೃಷ್ಟಿಯಲ್ಲಿ ಮೊದಲ ತಾಸಿನಲ್ಲಿ ಕೆಲಸ ಮಾಡಿದವನು ಬಯಸಿದ ಹಾಗೆ ಇರುವದಿಲ್ಲಾ. ದೇವರ ರಾಜ್ಯದಲ್ಲಿ ನಾವು ಪ್ರಮುಖರಲ್ಲಾ ಎಂದು ತಿಳಿದವರು (ಕೊನೆ) ದೇವರ ಲೆಕ್ಕಾಚಾರದಲ್ಲಿ "ಮೊದಲಿಗರು" (ಮತ್ತಾಯ 20:16).

## ಮುಕ್ತಾಯ

ಪರಿತ್ಯಾಗ, ಮಕ್ಕಳ, ಐಶ್ವರ್ಯ, ಹಾಗೂ ಬಹುಮಾನಗಳ[47] ಕುರಿತು ಕೇಳಿದ ಪ್ರಶ್ನೆಗಳಿಗೆ ಯೇಸು ಉತ್ತರಿಸಿದನು. ಈ ಪ್ರಶ್ನೆಗಳಿಗಿಂತ ಕಠಿಣವಾದ ಯಾವುದೇ ಪ್ರಶ್ನೆಗಳು ಪ್ರಾಯಶ ನಿಮ್ಮಲ್ಲಿ ಇರಲಾರದು. ಅವುಗಳಿಗೆಲ್ಲಾ ದೇವರ ವಾಕ್ಯವು ಉತ್ತರಿಸುತ್ತದೆ. ಪ್ರಶ್ನೆಗಳಿದ್ದರೆ, ನಿಮಗಿಂತ ಬುದ್ಧಿವಂತರಲ್ಲಿ ಕೇಳಿರಿ (ಅಪೊಸ್ತಲರ ಕೃತ್ಯಗಳ 8:31).[48] ನಿಮ್ಮ ಪ್ರಶ್ನೆಗಳನ್ನು ಬರೆದುಕೊಂಡು, ವಾಕ್ಯ ಓದುವರದಲ್ಲಿ ಮುಂದಾಗಿ, ಸತ್ಯವೇದವು ನೀಡುವ ಉತ್ತರವನ್ನು ಒಂದು ದಿನ ನೀವುಗಳು ಪಡೆಯುವಿರಿ.[49] ಪ್ರಶ್ನೆಗಳನ್ನು ಕೇಳುವದರಲ್ಲಿ ಯಾವುದೇ ಅಭ್ಯಾಂತರವು ಇರುವದಿಲ್ಲ.

---

## ಮಾಹಿತಿ

"ಪ್ರಶ್ನೆಗಳಿಗೆ ಉತ್ತರ" "ಪ್ರಶ್ನೆಗಳ" ತಲೆ ಬರಹ ಮುಂದುವರೆಯುತ್ತದೆ.

ದಾಂಪತ್ಯ ಹಾಗೆ ಪರಿತ್ಯಾಗ ಕುರಿತು ಯೇಸುವಿನ ಬೋಧನೆಗಳು ಇನ್ನು ಇವೆ. ಮದುವೆಯ ಕುರಿತಾದ ಪಾಠವನ್ನು ನೋಡಿರಿ. ಪರಿತ್ಯಾಗದ ಪತ್ರವನ್ನು ಪಡೆಯದ ಹಾಗೆ ಇರುವ ಪಾಠ ನೋಡಿರಿ.

ಯೇಸು ಮತ್ತು ಮಕ್ಕಳ ನಡುವಿನ ವಿಚಾರವು ಸುವಾರ್ತೆಗಳಲ್ಲಿರುವ ಮುಖ್ಯ ಕಥೆಯಾಗಿದೆಯ ಸಭೆಯಲ್ಲಿ ಕುಟುಂಬಗಳಲ್ಲಿ ಮಕ್ಕಳ ಪಾತ್ರವೆಂಬ ಪಾಠವನ್ನು ನೀಡಬಹುದು.

ಮದುವೆಯ ಕುರಿತ ಪಾಠದಲ್ಲಿ ಇರುವ ಐಶ್ವರ್ಯವಂಥನಾದ, ಯುವಕನ ವಿಚಾರವಿದೆ ನಂಬಿಗಸ್ತರು ದೇವರ ಆಶೀರ್ವಾದವನ್ನು ಪಡೆಯುವರು (ಮತ್ತಾಯ 19:29). "ಈ ಎಲ್ಲಾ ಹಾಗೂ ಪರಲೋಕವೂ" ಎಂಬ ಪ್ರಸಂಗ ಮಾಡಿರಿ. ಗೊಂದಲಮಯವಾದ ಯಜಮಾನ ಹಾಗೂ ಆಳುಗಳ ಪ್ರಸಂಗ ಮಾಡಿರಿ.

---

ಟಿಪ್ಪಣಿಗಳು

[1]ಮತ್ತಾಯ ಹಾಗೂ ಮಾರ್ಕರು, ಯೇಸು ಪಾಲೇಸ್ತಿನಿನಲ್ಲಿ ಮಾಡಿದ ಸೇವೆಯ "ಪೂರ್ಣ ವಿವರವನ್ನು ನೀಡಿರುವದಿಲ್ಲ. ಗಲಿಲಾಯ ಸೇವೆ ಮಾತ್ರವಿದೆ" (ಮತ್ತಾಯ 19:1; ಮಾರ್ಕ 10:1). ಸಂಕ್ಷಿಪ್ತ ವರದಿ ಮಾತ್ರವಿದೆ (ಮತ್ತಾಯ 19:2; ಮಾರ್ಕ 10:1), ಯೇಸು ಕ್ರಿಸ್ತನ ಯೆರೂಸಲೇಮಿನ ಅಂತಿಮ ಸೇವೆಯ ಕುರಿತು ತಿಳಿಸಿದ್ದಾರೆ. [2]"ಹೊಂದಾಣಿಕೆ ಮನೋಭಾವ"ದ ಪಾಠ ನೋಡಿರಿ. [3]ಪರಿತ್ಯಾಗ ಪತ್ರದ ಒಂದು ನಮೂನಕ್ಕೆ ನೋಡಿ W. W. Davies, "Divorce," *International Bible Standard Encyclopedia,* gen. ed. James Orr (Grand Rapids, Mich.: Wm. B. Eerdmans Publishing Co., 1939), 2:864. [4]ಸ್ನಾನಿಕನಾದ ಯೋಹಾನನು ಎದುರಿಸಿದ ಅಪಾಯದ ಸ್ಥಳದಲ್ಲಿ, ಯೇಸುವಿಗೂ ಅಪಾಯವಿರಬಹುದು. [5]ಮತ್ತಾಯ ಮತ್ತು ಮಾರ್ಕ ತದ್ವಿರುದ್ಧವಾಗಿರದೆ ಪ್ರೋತ್ಸಾಹದಾಯಕವಾಗಿದ್ದಾರೆ. [6]ಆದಿಕಾಂಡ 1:27. [7]ಆದಿಕಾಂಡ 2:24. [8]ಮತ್ತಾಯ 19:4-6ನ್ನು ಮದುವೆ ವಿಚಾರದ ಬಗ್ಗೆ "ಹೌದು, ನೀನು ಮದುವೆ ಆಗುವ ಪ್ರಸ್ತಾಪ ಹೊಂದಿರುವಿಯಾ?" ಎಂಬ ಪಾಠವನ್ನು ನೋಡಿರಿ.

[9]ಧರ್ಮೋಪದೇಶಕಾಂಡ 24:1-4 ಹಳೆಯ ಸಂಗತಿಗಳನ್ನು ಯೇಸುವಿನ ಶಿಲುಬೆಯ ಮೂಲಕ ತೆಗೆದು ಹಾಕಲ್ಪಟ್ಟಿದೆ, ವಿವರಣೆಗೆ ಸಮಯಸಾಲದು. [10]ದೇವರು ಪರಿತ್ಯಾಗದ ವಿಚಾರದಲ್ಲಿ ನೀಡಿದ ಕಟ್ಟಳೆಗಳು, ಇಸ್ರಾಯೇಲ್ಯರ ಕಠಿಣತೆಯ ಸಲುವಾಗಿ (ಮತ್ತಾಯ 19:10). ಅವರು ಜೀವನ ಪರ್ಯಾತರದ ಒಪ್ಪಂದದ ಬದಲು, ಅನೈತಿಕ ಜೀವನವೇ ಲೇಸು ಎಂದು ತಿಳಿದಿರಬಹುದು.

[11]ಮತ್ತಾಯ 19:8, ರಲ್ಲಿ ಯೆಹೂದ್ಯರು ಎಂದಿದ್ದರೆ, ಅಪೊಸ್ತಲರ ಕೃತ್ಯಗಳು 17:30ರಲ್ಲಿ ನೋಡಿರಿ. [12]ಮತ್ತಾಯ 19:3-9ರ ಮೇಲಿನ ಹೆಚ್ಚಿನ ಚರ್ಚೆಗಾಗಿ "ಹೌದು, ನೀನು ಮದುವೆ ಆಗುವ ಪ್ರಸ್ತಾಪ ಹೊಂದಿರುವಿಯಾ?" ಎಂಬ ಪಾಠವನ್ನು ನೋಡಿ. [13]ಮಾರ್ಕ 19:2-9ನ್ನು ಮದುವೆ ವಿಚಾರದ ಪಾಠದಲ್ಲಿ ನೋಡಿರಿ. [14]See William Barclay, *The Gospel of Matthew,* vol. 2, rev. ed., The Daily Study Bible Series (Philadelphia: Westminster Press, 1975), 197. [15]ಮಾರ್ಕನು ಅನ್ಯರಿಗೆ ಬರೆದಿರುವದರಿಂದ ಸ್ತ್ರೀಯರು ಪುರುಷರನ್ನು ಪರಿತ್ಯಾಗ ಮಾಡಬಹುದು ಎಂದು ಬರೆದಿರಬಹುದು. ನೋಡಿ "ಮಾರ್ಕನ ಪುಸ್ತಕ: ಸೇವಕನಾದ, ಕ್ರಿಸ್ತನು" ಎಂಬ ಪಾಠವನ್ನು *ಕ್ರಿಸ್ತನ ಜೀವನ ಚರಿತ್ರೆ, 1ನೇ* ಪುಸ್ತಕವನ್ನು ನೋಡಿ. [16]ಟಿಪ್ಪಣಿ 10ನ್ನು ನೋಡಿರಿ. [17]ಅನ್ಯರಭ್ಯಾಸ. [18]ಮದುವೆಯಾಗದಿರುವದು, ಮದುವೆಯಾಗಿರುವದಕ್ಕಿಂತ ಪರಿಶುದ್ಧವಲ್ಲೊ ಇಬ್ರಿಯ 13:4 "ದಾಂಪತ್ಯವು ಮಾನ್ಯವಾದದ್ದು, ಪೌಲನ ಪ್ರಕಾರ ಪುರುಷರು ಮದುವೆಯನ್ನು ನಿರಾಕರಿಸುವದು" ದೂಷಣೆ (1 ತಿಮೋಥೆ 4:3). [19]"ಮಕ್ಕಳ ಮೇಲಿರುವ ಈ ಚಿಕ್ಕ ಚರ್ಚೆ ಮೂರು ಸುವಾರ್ತೆಗಳು ಸಮನ್ವಯವಾಗಿ ಇವೆ ಎಂಬುದಕ್ಕೆ ಮತ್ತು ಕ್ರಿಸ್ತನ ಭೂಮಿ ಮೇಲಿರುವಾಗ ಸಲ್ಲಿಸಿದ ಸೇವೆಯ ಕುರಿತಾದ ಕಥೆಯ ಅಂತಿಮವರೆಗೂ ಒಂದೇ ಆಗಿದೆ ಎಂಬುದಕ್ಕೆ ಸೂಚನೆಯಾಗಿದೆ." (Robert Duncan Culver, *The Life of Christ* [Grand Rapids, Mich.: Baker Book House, 1976], 196-97.) [20]ಲೂಕ 2:28-32 ಮಗುವಾದ ಯೇಸುವನ್ನು ಸಿಮೆಯೋನನು ಕೈಯಲ್ಲಿಡಿದು ಆಶೀರ್ವದಿಸಿದನು.

[21]ಮಾರ್ಕ 9:36, ಯೇಸು ಸಹ ಮಗುವನ್ನು ಎತ್ತಿದ್ದನು. [22]ಮುಟ್ಟಿ ಪ್ರಾರ್ಥಿಸುವದು ಅಧಿಕವಾದ ಪ್ರೀತಿ. [23]H. I. Hester, *The Heart of the New Testament* (Liberty, Mo.: Quality Press, 1963), 180. [24]Culver, 196. [25]"ಶಿಷ್ಯತ್ವದ ಗುರುತುಗಳು" ಎಂಬ ಪಾಠವನ್ನು *ಕ್ರಿಸ್ತನ ಜೀವನ ಚರಿತ್ರೆ, 4ನೇ* ಪುಸ್ತಕದಲ್ಲಿ ನೋಡಿರಿ. [26]ಅವನು ದೇವಮಂದಿರದ (ಮಾರ್ಕ 5:36; KJV) ಅಥವಾ ಹಿರಿ ಸಭೆಯ ನಾಯಕನೇ ನಿಕದಾವನು ಹಿರೀ ಸಭೆಯ ನಾಯಕನಾಗಿದ್ದನು (ಯೋಹಾನ 3:1; 7:45, 50). [27]ಮಾಡಬೇಕಾದ ಒಳ್ಳೆಯ ಸಂಗತಿಗಳು (ಮತ್ತಾಯ 19:16). "ಒಳ್ಳೆಯ" ಎಂದು ಎರಡು ಸಭೆ ಕೇಳಲಾಗಿದೆ. [28]ಬೇರೆ ವಿಧವಾದ ಉತ್ತರವನ್ನು ನೀಡಬಹುದು. [29]ಆಶಿಸಬೇಡ (ಮಾರ್ಕ 10:19) ಮತ್ತಾಯನಲ್ಲಿ ನಿನ್ನ ನೆರೆಯವನನ್ನು ನಿನ್ನಂತೆಯೇ ಪ್ರೀತಿಸು (ಯಾಜಕಕಾಂಡ 19:18ಬಿ). ದಶಾಜ್ಞೆಗಳಲ್ಲಿನ ಆರು ಆಜ್ಞೆಗಳ ಸಾರಾಂಶ. [30]"ನೀನು ಪೂರ್ಣ ಮಾಡುವದಾದರೆ" (ಮತ್ತಾಯ 19:21) ಯಲ್ಲಿ "ಸಂಪೂರ್ಣ" ಆತ್ಮೀಕ ವೃದ್ಧಿಯ ಸಂಬಂಧ.

[31]ಮತ್ತಾಯ 6:19-21ನ್ನು ನೋಡಿ. [32]"ನನ್ನನ್ನು" ಹಿಂಬಾಲಿಸು ಎಂಬ ಅಗತ್ಯತೆ (ಮತ್ತಾಯ 16:24). [33]ಆದಿ ಸಭೆಯ ಸ್ಥಾಪನೆಯ ನಂತರ, ದೇವರ ಮಕ್ಕಳು ತಮ್ಮ ಸ್ವಾಸ್ಥವನ್ನು ಮಾರಿ, ಇತರ ಕ್ರೈಸ್ತರಿಗೆ ಸಹಾಯಿಸಿದರು (ಅಪೊಸ್ತಲರ ಕೃತ್ಯಗಳು 2:44, 45: 4:32-37). [34]ಇತರರನ್ನುಆಶಿಸಬಾರದು, ವ್ಯಯಕ್ತಿಕ ವಿಚಾರದಲ್ಲಿ ತಲೆಹಾಕಲೂ ಬಾರದು (ನೋಡಿ ಲೂಕ 12:13-15), "ಆಶೆ" ಆಶಿಸು. [35]ತನ್ನ ಅಂತ್ಯದ ಸೇವೆಯವರೆಗೆ ಯೇಸು ಪೂರ್ಣಾವಧಿ, ಸೇವಕರನ್ನು ನೇಮಿಸುತ್ತಿದ್ದನು (ನೋಡಿ ಲೂಕ 14:33). [36]ಲಾರ್ಡ್‌ಜಾರ್ಜ್ ನ್ಯೂಗೆಂಟ್ ಎರಡು ಬಾಗಿಲುಗಳು ಅಗುಲವಾದದ್ದು ಬಾರ ಹೊಗು ಪ್ರಾಣಿಗೆ, ಎರಡನೆಯದು ಕಾಲ್ನಡಿಗೆ ಜನರಿಗೆ. [37]ನೂತನ ಕ್ರೈಸ್ತ ತೀತ 3:5; ಹೊಸ ಸೃಷ್ಟಿ (2 ಕೊರಿಂಥ 5:17). [38]ಲೂಕ 22:30ರಲ್ಲಿ "ನನ್ನ ರಾಜ್ಯದಲ್ಲಿ" ಎಂದಿದ್ದರೆ ಮತ್ತಾಯದಲ್ಲಿ "ಹೊಸ ಸೃಷ್ಟಿ" ಎಂದಿದೆ (ಮತ್ತಾಯ 19:28). [39]ನಿತ್ಯತ್ವದಲ್ಲಿ ಸಕಲ ಕ್ರೈಸ್ತರು ಆಳುವರು (ಪ್ರಕಟಣೆ 5:10; 2 ತಿಮೋಥೆ 2:12). ಹಾಗೂ ಅವರು ನ್ಯಾಯತೀರಿಸುವರು (1 ಕೊರಿಂಥ 6:2). ವಾಕ್ಯದ ಆಧಾರದಿಂದ ದೈವೀಕ ಜೀವಿತವನ್ನು ಜೀವಿಸುವದು. [40]ಇಸ್ರಾಯೇಲ್ಯರು ಇಸ್ರಾಯೇಲ್ಯರಿಗಾಗಿ ದೇವರ ಉದ್ದೇಶವನ್ನು ಈಡೇರಿಸಲಿಲ್ಲ (ರೋಮಾಪುರ 9:6, 7). "ಇಸ್ರೇಲ್" ಅಂತ "ಸಭೆ" ಎಂಬುದು ಕೆಲವರ ಅಭಿಪ್ರಾಯ ಸಭೆಯ ಮೇಲಿನ ಅಪೊಸ್ತಲರ ಅಧಿಕಾರ.

[41]ದೇವರ ಸಭೆಯೇ, ಕ್ರೈಸ್ತರ ಆಸ್ತಿ. [42]Neil R. Lightfoot, *The Parables of Jesus,* Part 2 (Austin, Tex.: R. B. Sweet Co., 1965), 52. ಸಾಮ್ಯ ಎಂಬುದು "ದಿಗ್ರಮೆಗೊಳವುದು" ಎಕೆಂದರೆ ಈ ಸಾಮ್ಯದಲ್ಲಿನ ಸಂಬಳವನ್ನು ಯಾವ ಮನುಷ್ಯನು ಉಪಯೋಗಿಸಲು ಬಯಸುವುದಿಲ್ಲ - ಆದರೆ ಮನುಷ್ಯರ ಆಚಾರದೊಂದಿಗೆ ದೇವರು ಬಂದಿಸಲ್ಪಟ್ಟಿಲ್ಲ (ಯೆಶಾಯ 55:8, 9). [43]ಅಮೇರಿಕೆಯ ಸಹಜ ಅಭ್ಯಾಸ. [44]ಒಂದು ಆಣೆ, ಒಂದು ದಿನದ ಕೂಲಿ. [45]ಪ್ರತಿಸಲ ಯಜಮಾನನು ಸಂತೇ

ಬೀದಿಯಲ್ಲಿ ಹೋಗುತ್ತಿದ್ದನು. [46]ವಚನ 15 "ಹೊಟ್ಟೆ ಕಿಚ್ಚಿನ ಕಣ್ಣು" ಅಸೂಯೆ (ಜ್ಞಾನೋಕ್ತಿ 28:22). [47]ಸಾರಾಂಶ ಹೇಳಿ. [48]ಸತ್ಯವೇದ ಸಂಬಂಧದ ಪ್ರಶ್ನೆ ಕೇಳಿರಿ. [49]ಈ ಜೀವಿತದಲ್ಲಿ ಉತ್ತರಿಸಲಾಗದ ಪ್ರಶ್ನೆಗಳು, ದೇವರು ಅದನ್ನು ಪ್ರಕಟಿಸಿರುವದಿಲ್ಲ (ಧರ್ಮೋಪದೇಶಕಾಂಡ 29:29). ಅಗತ್ಯವಿರುವದು ಸತ್ಯವೇದದಲ್ಲಿದೆ.